ಕೆ ಎಸ್ ಕ್ಯೂ  ಎ ಎ ಸಿ – ಮಾದರಿ ಪ್ರಶ್ನೆ ಪತ್ರಿಕೆ 2023–2024

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ – ಶಿವಮೊಗ್ಗ

ತರಗತಿ:8    ವಿಷಯ – ಸಮಾಜ ವಿಜ್ಞಾನ    ಅಂಕಗಳು :50    ಸಮಯ –2 ಗಂಟೆ 30 ನಿಮಿಷಗಳು

I. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.    16×1=16

1. ದೇಶೀ ಸಾಹಿತ್ಯಕ್ಕೆ ಒಂದು ಉತ್ತಮ ಉದಾಹರಣೆ

A. ದೀಪವಂಶ ಮತ್ತು ಮಹಾವಂಶ    B. ಸಿ.ಯು.ಕಿ   C. ಇಂಡಿಕಾ    D.ಮುದ್ರರಾಕ್ಷಸ

2. ಹೇಳಿಕೆ (A) ಚಾಲುಕ್ಯರು ಚಾಲುಕ್ಯ ಶೈಲಿ ಎಂಬ ವಿಶಿಷ್ಟ ಶಿಲ್ಪಕಲಾಶೈಲಿಯನ್ನು ಭಾರತೀಯ ವಾಸ್ತುಶಿಲ್ಪದಲ್ಲಿ ಪರಿಚಯಿಸಿದರು.

ಪ್ರತಿಪಾದನೆ (R) ದೇವಾಲಯ ವಾಸ್ತುಶಿಲ್ಪದ ತೊಟ್ಟಿಲುಗಳಲ್ಲಿ ಐಹೊಳೆಯು ಒಂದಾಗಿದೆ.

A. ಹೇಳಿಕೆ ಏ ತಪ್ಪು

B. ಪ್ರತಿಪಾದನೆ ಆರ್ ಸರಿ

C. ಹೇಳಿಕೆ ಏ ಮತ್ತು ಪ್ರತಿಪಾದನೆ ಆರ್ ಎರಡು ಸರಿ

D. ಹೇಳಿಕೆ ಎ ಮತ್ತು ಪ್ರತಿಪಾದನೆ ಆರ್ ಎರಡು ತಪ್ಪು

3. ವೇದಗಳಲ್ಲಿ ಅತ್ಯಂತ ಪ್ರಾಚೀನ ವೇದ

A. ಸಾಮವೇದ    B. ಯಜುರ್ವೇದ    C.ಋಗ್ವೇದ    D. ಅಥರ್ವವೇದ

4. ಬ್ಯಾಬಿಲೋನಿಯಾದ ಉತ್ತರಭಾಗವನ್ನು ಅಖಡ್ ಎಂದು ಕರೆದರೆ, ದಕ್ಷಿಣಭಾಗವನ್ನು ಹೀಗೆ ಕರೆದರು.

A. ನದಿಗಳ ನಾಡು    B. ಆಸ್ಸೀರೀಯ    C. ಟೈಗ್ರೀಸ್    D.ಸುಮೇರ್

5. ಶಾಸನಗಳ ಪಿತಾಮಹಾ ಎಂದು ಕರೆಯಲ್ಪಡುವ ರಾಜ

A. ಚಂದ್ರಗುಪ್ತಮೌರ್ಯ    B. ಅಶೋಕ    C. ಬಿಂದುಸಾರ    D. ಕನಿಷ್ಕ

6. ಏಕಪೌರತ್ವನ್ನು ಹೊದಿರುವ ರಾಷ್ಟ್ರ

A. ಭಾರತ    B. ಅಮೇರಿಕ    C. ಕೆನಡ    D. ಸ್ವಿಡ್ಜರ್ಲ್ಯಾಂಡ್

7. ಮತದಾನದ ಕನಿಷ್ಟ ವಯಸ್ಸನ್ನು 21 ವರ್ಷಗಳಿಂದ 18 ವರ್ಷಕ್ಕೆ ಇಳಿಸಿದ ಸಂವಿಧಾನದ ತಿದ್ದುಪಡಿ

A. 91ನೇ ತಿದ್ದುಪಡಿ    B. 86ನೇ ತಿದ್ದುಪಡಿ

C. 61ನೇ ತಿದ್ದುಪಡಿ    D. 76ನೇ ತಿದ್ದುಪಡಿ

8. ಕುಟುಂಬ ಒಂದು

A. ರಾಜಕೀಯ ಸಂಸ್ಥೆ    B. ಆರ್ಥಿಕಸಂಸ್ಥೆ    C. ಶೈಕ್ಷಣಿಕ ಸಂಸ್ಥೆ    D.ಸಾಮಾಜಿಕ ಸಂಸ್ಥೆ

9. ಸಮಾಜವನ್ನು ಅಧ್ಯಾಯನ ಮಾಡುವ ವಿಜ್ಞಾನವೇ ಸಮಾಜಶಾಸ್ತ್ರ ಎಂದು ಹೇಳಿದವರು

A. ಆಗಸ್ಟ ಕಾಮ್ಟೆ  B. ಕಾರ್ಲ್ ಮಾರ್ಕ್ಸ್  C.ಮ್ಯಾಕ್ಸವೇಬರ್  D. ಸ್ಪೇನ್ಸರ್

10.ಮಿಸ್ಟ್ರೇಲ್ ಇದಕ್ಕೆ ಉತ್ತಮ ಉದಾಹರಣೆ

A.ಸ್ಥಳೀಯ ಮಾರುತಗಳು  B.ಋತುಮಾನ ಮಾರುತಗಳು

C.ಆವರ್ತ ಮಾರುತಗಳ  D. ನಿರಂತರ ಮಾರುತಗಳು

11. ಸಾಗರ ಅಥವಾ ಸಮುದ್ರದ ನೀರಿನಲ್ಲಿ ಕರಗಿರುವ ಉಪ್ಪಿನಾಂಶಗಳ ಪ್ರಮಾಣವನ್ನು ಹೀಗೆ ಕರೆಯುತ್ತಾರೆ.

A. ಕಲ್ಲುಪ್ಪು  B. ಲವಣತೆ  C. ಪ್ರವಾಹ  D. ಖನಿಜ

12.ಸೂರ್ಯನಿಂದ ಪ್ರಸರಿಸುವ ಅತ್ಯಂತ ಅಪಾಯಕಾರಿಯಾದ ಕಿರಣ

A. ಇಂಗಾಲ  B. ಆಮ್ಲಜನಕ  C. ಬೀಟಾ  D. ಅತಿನೇರಳೆ

13. ರಾಜಣ್ಣನು ತನ್ನಲ್ಲಿರುವ ಪೆನ್ನನ್ನು ರಾಮನಿಗೆ ಕೊಟ್ಟು ಅವನಿಂದ ಹಣ್ಣನ್ನು ಪಡೆದನು ಇದು ಒಂದು

A. ವಿತರಣಾ ಚಟುವಟಿಕೆ  B. ವಿನಿಮಯ ಚಟುವಟಿಕೆ

C. ಅನುಭೋಗಿ ಚಟುವಟಿಕೆ  D. ಉತ್ಪಾದನ ಚಟುವಟಿಕೆ

14. ಒಂದು ರಾಷ್ಟ್ರದ ಒಂದು ವರ್ಷದ ಅವಧಿಯ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯ

A. ತಲಾವರಮಾನ  B. ವಾರ್ಷಿಕ ವರಮಾನ  C. ರಾಷ್ಟ್ರೀಯ ವರಮಾನ  D. ನಿವ್ವಳ ವರಮಾನ

15. ಪಾಲುಗಾರಿಕೆ ಸಂಸ್ಥೆಗಳ ನೋಂದಣಿಗೆ ಅವಕಾಶ ನೀಡುವ ಕಾಯಿದೆ

A. 1932 ರ ಕಾಯಿದೆ  B. 1942 ರ ಕಾಯಿದೆ  C. 1976 ರ ಕಾಯಿದೆ  D. 1986ರ ಕಾಯಿದೆ

16. ಸಹಕಾರಿ ಸಂಘಗಳನ್ನು ರಚಿಸಲು ಇರಬೇಕಾದ ಕನಿಷ್ಟ ಸದಸ್ಯರ ಸಂಖ್ಯೆ

A. 5  B. 10  C. 13  C. 15

II . ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ . 4×1=4

17. ಆಧಾರಗಳು ಎಂದರೇನು?

18. ಕವಿರಾಜಮಾರ್ಗ ಕೃತಿಯನ್ನು ರಚಿದವರು ಯಾರು?

19. ಪಶುಪಾಲನಾ ಸಮಾಜ ಎಂದರೇನು?

20. ಪೂರೈಕೆ ಎಂದರೇನು?

III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 6×2=12

21. ಸಿಂಧು ನಾಗರಿಕತೆಯ ನಗರ ಯೋಜನೆ ಬಗ್ಗೆ ತಿಳಿಸಿ.

22. ಮಿಡ್ನಾಪುರದಲ್ಲಿ ಸಿಕ್ಕ ಕಮಲೆಯ ಸಾಮಾಜಿಕ ಸ್ಥಿತಿ ಹೇಗಿತ್ತು?

23. ಜಲ ಮಾಲಿನ್ಯವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ.

24. ಮಾತುರಗಳ ನಾಲ್ಕು ಪ್ರಮುಖ ವಿಧಗಳನ್ನು ಹೆಸರಿಸಿ.

25. ಭಾರತದಲ್ಲಿ ಪೌರತ್ವವನ್ನು ಪಡೆಯುವ ವಿಧಾನಗಳನ್ನು ಬರೆಯಿರಿ.

26. ಅನುಭೋಗ ಮತ್ತು ಉತ್ಪಾದನೆ ರಾಷ್ಟ್ರೀಯ ವರಮಾನದ ಮೇಲೆ ಮಹತ್ವದ ಪರಿಣಾಮ ಉಂಟುಮಾಡುತ್ತದೆ. ಹೇಗೆ ಸಮರ್ಥಿಸಿ

IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ. 3×3=9

27. ಗುಪ್ತರ ಕಾಲವನ್ನು ಸುವರ್ಣಯುಗವೆಂದು ಏಕೆ ಕರೆಯುತ್ತಾರೆ?

28. ಭೂಮಿಯ ಅಂತರಾಳದ ಚಿತ್ರವನ್ನು ಬರೆದು, ಭಾಗಗಳನ್ನು ಗುರುತಿಸಿ.

29. ಶ್ರಮದ ಮಹತ್ವವನ್ನು ವಿವರಿಸಿ.

V. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4×1=4

30. ಗ್ರಾಮಗಳ ಅಭಿವೃದ್ಧಿಯಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳ ಕಾರ್ಯಗಳು ಪ್ರಮುಖವಾಗಿವೆ. ಸ್ಪಷ್ಟೀಕರಿಸಿ.

VI. 31. ಭಾರತದ ನಕ್ಷೆ ರಚಿಸಿ ಬಾದಾಮಿ ಚಾಲುಕ್ಯರ ಸಾಮ್ರಾಜ್ಯದ ವಿಸ್ತಾರವನ್ನು ಗುರುತಿಸಿ, ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. 5X1=5

1. ಐಹೊಳೆ
2. ಅಜಂತಾ